ಚಳುವಳಿ ಮಾಡಿ ಒಂದು ಮರಕ್ಕೂ ಕೊಡಲಿ ಏಟು ಬೀಳದಂತೆ ನೋಡಿಕೊಂಡಿದ್ದರು. ಸರ್ಕಾರವೇ ಇವರ ಹೋರಾಟಕ್ಕೆ ಹೆದರಿ ಹಿಂದಿರುಗಿ ಹೋಗಿತ್ತು.

ಸುಮಾರು ಅದೇ ಸಮಯದಲ್ಲಿ ಮುಖ್ಯಮಂತ್ರಿ ಗುಂಡೂರಾಯರ ವಿರುದ್ಧದ ರೈತರ ಜೈಲ್ ಭರೋ ಚಳವಳಿಯೂ ತಾರಕಕ್ಕೇರಿ ನನ್ನ ಅಡಿಯೇ ಊರೆಲ್ಲ ಒಗ್ಗೂಡಿತ್ತು. ಯಾವ ಪೊಲೀಸರಿಗೂ, ಅಧಿಕಾರಿಗಳಿಗೂ ಅನುಮತಿಯಿಲ್ಲದೇ ಊರೊಳಕ್ಕೆ ಪ್ರವೇಶವಿಲ್ಲವೆಂದು ಬೋರ್ಡ್ ಹಾಕಿಕೊಂಡು ಸರದಿಯಲ್ಲಿ ಮುಷ್ಕರ ಮಾಡಿದ್ದರು. ಐವತ್ತರವತ್ತು ಜನರನ್ನು ಪೊಲೀಸರೂ ಬಂಧಿಸಿ ಬಳ್ಳಾರಿ ಜೈಲಿಗೆ ಹಾಕುವುದಾಗಿ ಕರಕೊಂಡು ಹೋದವರು, ಜೈಲಿನಲ್ಲೂ ಜಾಗವಿಲ್ಲದ್ದರಿಂದ, ಅಲ್ಲೇ ಅರ್ಧ ದಾರಿಯಲ್ಲಿ ಇವರ ಜೇಬಿನಲ್ಲಿದ್ದ ದುಡ್ಡನ್ನೆಲ್ಲ ಕಿತ್ತುಕೊಂಡು ಇಳಿಸಿ ಪರಾರಿಯಾಗಿದ್ದರು. ಇವರು ಬೈದುಕೊಂಡು ಸಿಕ್ಕ ಸಿಕ್ಕ ಕಡೆ ಉಂಡು ತಿಂದು ನಡೆದುಕೊಂಡು ಊರು ಸೇರುವ ವೇಳೆಗೆ ವಾರವೇ ಕಳೆದುಹೋಗಿತ್ತು.

ಅದು ಬಿಟ್ಟರೆ ಈಗಲೇ ಅವರೆಲ್ಲ ಒಗ್ಗಟ್ಟಾಗಿ ಬಂದುದು. ಆಗ ಯುವಕರಿದ್ದವರೆಲ್ಲ ಈಗ ಮುದುಕರಾಗುತ್ತಾ ಬಂದಿದ್ದು, ಅವರ ಮಕ್ಕಳುಗಳೂ ಅವರ ಮಾರ್ಗದರ್ಶನದಲ್ಲಿ ಒಗ್ಗೂಡಿದ್ದರು. ಎಲ್ಲರೂ ಸೇರಿ ಒಂದು ತೀರ್ಮಾನಕ್ಕೆ ಬಂದರು: ರಸ್ತೆಯನ್ನು ದೊಡ್ಡದು ಮಾಡಲೇಬೇಕೆಂದರೆ ನನ್ನ ಇನ್ನೊಂದು ಪಕ್ಕದಲ್ಲಿ ರಸ್ತೆ ನಿರ್ಮಿಸಲಿ, ಪರಿಹಾರ ಕೊಟ್ಟು ನಮ್ಮ ಮನೆಗಳನ್ನು ಬೇಕಾದರೆ ಒಡೆದುಹಾಕಲಿ, ಆದರೆ ಯಾವ ಕಾರಣಕ್ಕೂ ಮರವನ್ನು ಕಡಿಯಲು ಬಿಡುವುದಿಲ್ಲವೆಂದು. ಪತ್ರಕರ್ತ ಚಂದ್ರಶೇಖರ ಈಗ ರಿಟೈರ್ ಆಗಿದ್ದು ಆತನ ಮಾತನ್ನು ಯಾವ ಪತ್ರಿಕೆಯೂ ಕೇಳಿ ಬರೆಯುವ ಸ್ಥಿತಿಯಲ್ಲಿ ಇರಲಿಲ್ಲ. ಆದರೆ ಲೇಖಕ ಯಮುನಪ್ಪನವರ ಕೀರ್ತಿಯು ಮುಮ್ಮಡಿಸಿದ್ದು, ಇಡೀ ಕರ್ನಾಟಕವೇ ಅವರ ಮಾತಿಗೆ ಅಪಾರವಾದ ಗೌರವವನ್ನು ಕೊಡುತ್ತಿತ್ತು. ಈಗಾಗಲೇ ಅಖಿಲ ಭಾರತ ಸಾಹಿತ್ಯ ಸಮ್ಮೇಳನದ ಅಧ್ಯಕ್ಷರಾಗಿಯೂ, ಕೇಂದ್ರ ಸಾಹಿತ್ಯ ಅಕಾಡೆಮಿಯ ಪ್ರಶಸ್ತಿಗಳನ್ನೆಲ್ಲ ಗಳಿಸಿಕೊಂಡಿದ್ದು ಜ್ಞಾನಪೀಠ ಪ್ರಶಸ್ತಿಯ ಆಯ್ಕೆಯಲ್ಲಿ ಇವರ ಹೆಸರು ಮುಂಚೂಣಿಯಲ್ಲಿರುವುದಾಗಿ ಪುಕಾರು ಎದ್ದಿದ್ದರಿಂದ, ಇನ್ನೇನು ಈಗಲೋ ಆಗಲೋ ಪ್ರಶಸ್ತಿ ಪ್ರಕಟವಾಗಿಬಿಟ್ಟರೆ, ತಾವು ಅವರ ಮಾತನ್ನು ಕೇಳಲಿಲ್ಲವೆಂದು ನೇರ ಸಂಪಾದಕರನ್ನೇ ಸಂಪರ್ಕಿಸಿಬಿಟ್ಟರೆ ತಮ್ಮ ಮರ್ಯಾದೆ ಹೋಗುತ್ತದೆಂದು ಸ್ಥಳೀಯ ಪತ್ರಕರ್ತರು ಹೆದರಿದ್ದರು. ಆ ಯಮುನಪ್ಪ ಬೇರೆ ಯಾರೂ ಅಲ್ಲ, ಪುಣ್ಯಕೋಟಿ ಪದ್ಯ ಕಟ್ಟಿ ಹಾಡಿದ್ದನಲ್ಲ ಕಾಳಿಂಗನ ಕೊನೇ ಮಗ, ಅವನ ಮರಿ ಮೊಮ್ಮಗನೇ ಆಗಿದ್ದ. ಯಮುನಪ್ಪನ ಮಗ ಇನ್ನೊಬ್ಬನಿದ್ದಾನೆ, ಆತ ಬೆಂಗಳೂರಿನಲ್ಲಿ ಸಿನಿಮಾಗಳಲ್ಲೆಲ್ಲ ನಟನೆ ಮಾಡುತ್ತ ದೊಡ್ಡ ಹೆಸರು ಮಾಡುತ್ತಿದ್ದಾನೆ.

ಕಾಳಿಂಗ ಅವತ್ತು ಕಟ್ಟಿದ್ದ ಒಂಟಿ ಮನೆಯೇನಿತ್ತಲ್ಲ, ಅದರ ಸುತ್ತ ಅಕ್ಕಪಕ್ಕದಲ್ಲಿ ನೂರಾರು ಮನೆಗಳು ಹುಟ್ಟಿಕೊಂಡು ಈಗ ಒಂದು ದೊಡ್ಡ ಗ್ರಾಮವೇ ಆಗಿತ್ತು. ಮುಖ್ಯಮಂತ್ರಿ ರಾಮಕೃಷ್ಣ ಹೆಗಡೆ ಜಿಲ್ಲಾ ಪರಿಷತ್ತು ಕಾಯ್ದೆ ತಂದಾಗ ಇದು ಮಂಡಲ ಪಂಚಾಯಿತಿಯ ಕೇಂದ್ರ ಸ್ಥಾನವಾದದ್ದಲ್ಲದೇ, ಜಿಲ್ಲಾ ಪರಿಷತ್ತಿನ ಒಂದು ಪ್ರಮುಖ ಕ್ಷೇತ್ರವೂ ಆಗಿತ್ತು. ಇಲ್ಲಿಂದ ಆರಿಸಿಬಂದಿದ್ದ ರಾಮೇಗೌಡ ಐದು ವರ್ಷ ಜಿಲ್ಲಾ ಪರಿಷತ್ತು ಅಧ್ಯಕ್ಷರಾಗಿದ್ದರು. ಆಮೇಲೆ ಪ್ರಧಾನಿ ರಾಜೀವ ಗಾಂಧಿ ಇದನ್ನೇ ಪರಿಷ್ಕರಣೆ ಮಾಡಿ ಇಡೀ ದೇಶದಲ್ಲಿ ಪಂಚಾಯಿತಿ ಕಾಯ್ದೆಯನ್ನು ತಂದಾದ ಮೇಲೆ ರಾಮೇಗೌಡ ಜಿಲ್ಲಾ ಪಂಚಾಯಿತಿಗೆ ನಿಲ್ಲದೇ, ಎಮ್ಮೆಲ್ಲೆಗೆ ನಿಂತು ಸೋತರೂ ಅವರ ಮಾತಿಗೆ ಈಗಲೂ ಒಬ್ಬ ಮಂತ್ರಿಯ ಮಾತಿಗಿರುವಷ್ಟೇ ಕಿಮ್ಮತ್ತಿದೆ.

ಇಂಥ ಹಿನ್ನೆಲೆಯಿರುವುದರಿಂದ ನನ್ನನ್ನು ಮತ್ತೆ ಕಡಿಯಲು ಮುನ್ನುಗ್ಗುವ ಸಾಹಸವನ್ನು ಮಾಡಲಾರದೇ, ಸುಮ್ಮನಿರಲೂ ಆಗದೇ ನನ್ನನ್ನು ಒಣಗಿಸಿದರೆ ಕಡಿಯುವುದು ಸುಲಭವೆಂದು ಪಿತೂರಿಯನ್ನು ಮಾಡಲಾರಂಭಿಸಿದ. ಹಗಲೆಲ್ಲ ಮರದ ಬುಡದಲ್ಲಿ ಏನಿಲ್ಲವೆಂದರೂ ಕನಿಷ್ಠ ಹತ್ತು ಹದಿನೈದು ಜನರು ಕುಂತು, ನಿಂತು, ಮಲಗಿ ಕಾಲಕಳೆಯುತ್ತಿರುತ್ತಾರೆ. ಆ ರಸ್ತೆಯಲ್ಲಂತೂ ಜನ ಸದಾ ಸುಳಿದಾಡುತ್ತಲೇ ಇರುತ್ತಾರೆ. ಆದ್ದರಿಂದ ರಾತ್ರಿ ಹೊತ್ತು ಯಾರೋ ಒಬ್ಬ ಗ್ಯಾಂಗ್‌ಮನ್‌ಗೆ ಚೆನ್ನಾಗಿ ಕುಡಿಸಿ ಆತನ ಕೈಲಿ ಮೈಲುತುತ್ತದ ಪುಡಿಯನ್ನು ಅರೆದು ಕರಗಿಸಿದ ದ್ರಾವಣವನ್ನು ಒಂದು ಬೀರಿನ ಬಾಟಲಿಯಲ್ಲಿ ತುಂಬಿಸಿ ನನ್ನ ಬುಡದಲ್ಲಿ ಸುರಿಯಲು ವ್ಯವಸ್ಥೆ ಮಾಡಿದ್ದ. ಮಬ್ಬುಗತ್ತಲೆಯಲ್ಲಿ ಆತ ನನ್ನ ಬುಡದವರೆಗೂ ಕಾಂಕ್ರೀಟು ಹಾಕಿ ಕಲ್ಲುಚಪ್ಪಡಿ ಕೂರಿಸಿದ್ದರಲ್ಲಿ ಸದುವೇ ಸಿಗದೇ ಒಂದಷ್ಟು ಹೀರಿಕೊಂಡರೂ ಇನ್ನೊಂದಷ್ಟು ಹೊರಕ್ಕೂ ಚೆಲ್ಲಿ ಅಲ್ಲೆಲ್ಲ ಹೆಪ್ಪುಗಟ್ಟಿತ್ತು. ಬೆಳಗ್ಗೆ ಮತ್ತೆ ಎಂದಿನಂತೆ ಕಟ್ಟೆ ಮೇಲೆ ಕೂರಲು ಬಂದ ಜನರಿಗೆ ಇದರ ನೀಲಿಗಟ್ಟಿದ ರಸವನ್ನು ಕಂಡು ಏನೋ ಅನುಮಾನದ ವಾಸನೆ ಬಡಿಯಿತು. ಒಂದೇ ದಿನ ಸುರಿಯುವ ದ್ರಾವಣ ನನ್ನನ್ನು ಸುಡಲು ಸಾಲುವುದಿಲ್ಲವೆಂದು ಇನ್ನೊಂದು ದಿನ ಮತ್ತೆ ಆಸಿಡ್‌ನ ದೊಡ್ಡ ಬಾಟಲಿಯನ್ನೇ ಕೊಟ್ಟು ಕಳಿಸಿದ್ದ. ಆತ ಕುಡಿದು ತೂರಾಡುತ್ತ ಬಂದವನು ನನಗೂ 'ತಗೋ ನೀನೂ ಕುಡಿ' ಎಂದು ನನ್ನ ಬುಡಕ್ಕೆ ಸುರಿಯುತ್ತಿರುವುದನ್ನು ರಾತ್ರಿ ಹತ್ತರ ಸುಮಾರಿಗೆ ಕಂಡ ಯಾರೋ ಹುಡುಗ ಕೂಗಿಕೊಂಡಿದ್ದ.

ಊರವರೆಲ್ಲ ಉಂಡು ಮಲಗುವ ಮುನ್ನ ಎಲೆ ಅಡಿಕೆ ಮೆಲ್ಲುತ್ತಿದ್ದವರು ಓಡೋಡಿ ಬಂದವರು ಆ ಸುರಿದಲ್ಲಿಂದ ಹೊಗೆ ಏಳುತ್ತಿರುವುದನ್ನು ಕಂಡು ಅವನನ್ನು ಹಿಡಿದು ಅವನ ಕೈಯಲ್ಲಿದ್ದ ಎರಡು ಲೀಟರಿನ ನೀರಿನ ಬಾಟಲಿಯನ್ನು ಕಿತ್ತುಕೊಂಡರು. ಕಿತ್ತುಕೊಳ್ಳುವ ರಭಸದಲ್ಲಿ ಕುಲುಕಿದ ಆಸಿಡ್ ಅವನ ಕೈಮೇಲೆಲ್ಲ ಚೆಲ್ಲಿ ಅಕರಾಳ ವಿಕರಾಳವಾಗಿ ಕಿರುಚಾಡಲಾರಂಭಿಸಿದ. ಸೇದುವ ಹಗ್ಗ ತರಿಸಿ ಅವನನ್ನು ನನ್ನ ಬುಡದಲ್ಲೇ ಕಟ್ಟಿಹಾಕಿದರು. ಹಗ್ಗ ಹಾಕಿದಾಗಲೇ ನಾನು ನನ್ನ ಸುತ್ತಳತೆಯನ್ನು ನೋಡಿಕೊಂಡಿದ್ದು. ಹತ್ತು ಜನ ಪರಸ್ಪರ ಕೈ ಜೋಡಿಸಿ ತಬ್ಬಿಕೊಂಡರೆ ನನ್ನ ಒಂದು ಸುತ್ತನ್ನು ಮುಟ್ಟಬಹುದಿತ್ತು. ಸುಮಾರು ಐನೂರಕ್ಕಿಂತಲೂ ಅಧಿಕ ವರ್ಷದಿಂದ ಬದುಕಿದ್ದೇನೆಂದರೆ ಇದು ಕಡಿಮೆಯೇ ಆಯಿತೇನೋ. ಪುಣ್ಯಕ್ಕೆ ನನ್ನ ಬುಡದಲ್ಲಿ ಎಂಟು ದಿಕ್ಕಿಗೂ ಒಂದೊಂದರಂತೆ ಕವಲೊಡೆದ ಎಂಟು ಕೊಂಬೆಗಳು, ಅವುಗಳ ಉಪರೆಂಬೆಗಳು, ಅವವುಗಳ ಮರಿಟೊಂಗೆಗಳು, ಮತ್ತವವುಗಳ ಹರೆಗಳು, ಹೀಗೆ ನನ್ನ ವಿಸ್ತೀರ್ಣ ನನಗೆ ಆಶ್ಚರ್ಯವಾಗುವಷ್ಟು ಜಾಗವನ್ನು ಆಕ್ರಮಿಸಿಬಿಟ್ಟಿತ್ತು. ನನ್ನ ರೆಂಬೆಗಳು ನೆಲಕ್ಕೆ ಸಮಾನಾಂತರವಾಗಿ ಟಿಸಿಲೊಡೆದು ಬಾಗದೇ ಮೇಲ್ಮುಖವಾಗಿ ಬೆಳೆದಿದ್ದರಿಂದ ಅವುಗಳ ಭಾರ ಅವಕ್ಕೆ ಅಧಿಕವೆನಿಸದೇ ಯಾವ ಕೊಂಬೆಗಳೂ ಮುರಿದು ಊನಗೊಂಡಿರಲಿಲ್ಲ.

ಕ್ರಮೇಣ ಕೊಂಚ ಕೊಂಚವೇ ಮಣ್ಣಿನಲ್ಲಿ ಕರಗಿದ ಆ್ಯಸಿಡ್ ನನ್ನ ಒಳ ಸೇರಲಾರಂಭಿಸಿತ್ತು. ವಾಸ್ತವವಾಗಿ ನಿನ್ನೆ ಚೆಲ್ಲಿದ್ದ ಮೈಲುತುತ್ತದ ದ್ರಾವಣ ನನಗಿಷ್ಟು ಉಪದ್ರವ ನೀಡಿರಲಿಲ್ಲ. ಯಾವಾಗ ನನ್ನ ತೊಗಟೆಯೊಳಗಿಂದಲೂ ಮುಖ್ಯ ಕಾಂಡಕ್ಕೆ ಸೇರಿಕೊಂಡಿತೋ ಆಗ ಉರಿ ಆರಂಭವಾಯಿತು. ಉರಿ ಅಂದರೆ ಅಂತಿಂಥ ಉರಿಯಲ್ಲ. ಮನುಷ್ಯರಿಗೆ ಚೇಳು ಕಚ್ಚಿದರೆ ಆಗುತ್ತದಲ್ಲ ಅಂಥ ಉರಿ. ಚಡಪಡಿಸಲಾರಂಭಿಸಿದೆ. ತಕ್ಷಣಕ್ಕೆ ಏನು ಮಾಡಬೇಕೆಂಬುದೇ ಹೊಳೆಯಲಿಲ್ಲ. ಅಷ್ಟರಲ್ಲಿ ಅವನನ್ನು ಕಟ್ಟಿಹಾಕಿದ ಜನ ಈ ಕೃತ್ಯವನ್ನು ಮಾಡಲು ಹೇಳಿದವರು ಯಾರು ಎಂದು ಬಾಯಿ ಬಿಡಿಸಲು ಪ್ರಯತ್ನಿಸಿದರು. ಆದರೂ ಕುಡಿತ ಜಾಸ್ತಿಯಾಗಿದೆ ಎನ್ನುವಂತೆ ನಾಟಕವಾಡಿದನೇ ಹೊರತು ಹೇಳಲಿಲ್ಲ. ಯಾವಾಗ ಯಾರೋ ಒಬ್ಬ ಯುವಕ ಬಾಟಲಿಯಲ್ಲಿದ್ದ ಆಸಿಡ್ಡನ್ನು ಹೆಂಡದಂತೆ ಕುಡಿಸಲು ಅವನ ಬಾಯಿಗೆ ತುರುಕಿದನೋ ಆಗ ಇನ್ನೂ ಸುಮ್ಮನಿದ್ದರೆ ಅದನ್ನು ಕುಡಿಸಿಯೇಬಿಡುತ್ತಾನೆ, ತಾನು ಸತ್ತೇ ಹೋಗಿಬಿಡುತ್ತೇನೆ ಎಂದು ಪ್ರಾಣಾಪಾಯದಿಂದ ನಲುಗಿ ಮಂಜುನಾಥನ ಹೆಸರನ್ನು ಹೇಳಿಬಿಟ್ಟ!

ಊರ ಜನರೆಲ್ಲ ಈಗಿಂದೀಗಲೇ ಮಂಜುನಾಥನನ್ನು ಅಲ್ಲಿಗೆ ಕರೆಸಬೇಕಂತಲೂ, ಇನ್ನು ಕೆಲವರು ಪೊಲೀಸರಿಗೆ ಕಂಪ್ಲೇಂಟು ಕೊಡಬೇಕೆಂತಲೂ ಹೇಳುತ್ತಿದ್ದರು. ಪೊಲೀಸರಿಗೆ ಒಪ್ಪಿಸಿದರೆ ಆತ ತಪ್ಪಿಸಿಕೊಂಡು ಬಿಡುತ್ತಾನೆ, ಆದ್ದರಿಂದ ಈಗಿಂದೀಗಲೇ ಅವನನ್ನೂ ಸೇರಿಸಿ ಮರಕ್ಕೆ ಕಟ್ಟಿಹಾಕಿ ಬೆಳಗ್ಗೆ ಪೊಲೀಸರಿಗೆ ಒಪ್ಪಿಸಬೇಕೆಂದು ತೀರ್ಮಾನಿಸಿದರು. ಸದ್ದು ಮಾಡದಂತೆ ನಾಲ್ಕಾರು ಜನರನ್ನು ಕಳಿಸಿಕೊಟ್ಟ ಊರ ಹಿರಿಯರು ಅವನು ಬರುವುದನ್ನೇ ಕಾದು ಕುಳಿತರು.

ಆದರೆ ರಾತ್ರಿ ಹನ್ನೊಂದು ಗಂಟೆಗೆ ಹೆಂಡತಿಯ ಜತೆ ಚಕ್ಕಂದವಾಡುತ್ತ ಮಲಗಿದ್ದ ಮಂಜುನಾಥನ ಮನೆಯ ಬೆಲ್ಲು ಹೊಡೆದಾಗಲೇ ಅನುಮಾನಗೊಂಡು, ತನ್ನ ಹೆಂಡತಿಗೆ ಯಾರೇ ಬಂದಿದ್ದರೂ ತಾನು ಊರಲ್ಲಿಲ್ಲವೆಂದೂ, ಆಫೀಸಿನ ಕೆಲಸದ ಮೇಲೆ ರಾಜಧಾನಿಗೆ ಹೋಗಿದ್ದೇನೆಂದು ಹೇಳುವಂತೆಯೂ ತಾಕೀತು ಮಾಡಿ ಕಳಿಸಿದ. ಆಕೆ ಬಾಗಿಲಿಗೆ ಅಳವಡಿಸಿದ್ದ ಭೂತಗನ್ನಡಿಯಿಂದಲೇ ಇಣುಕಿದವಳು, ಬಾಗಿಲ ಸಂದಿಯಿಂದಲೇ ಯಾರು,